## ಖಾಲಿ ಕುರ್ಚಿಗೆ ಭಾಷಣ ಮಾಡಬೇಕಾ? ಸ್ಪೀಕರ್‌ಗೆ ಸಿದ್ದರಾಮಯ್ಯ ಪ್ರಶ್ನೆ

# ಶಾಸಕರ ನಿರಾಸಕ್ತಿ 55 ನಿಮಿಷ ಕಲಾಪ ತಡ

**ಬೆಂಗಳೂರು:** ಶಾಸಕರ ಕೋರಂ ಕೊರತೆಯಿಂದ ವಿಧಾನಸಭೆ ಕಲಾಪ ಮಂಗಳವಾರ 55 ನಿಮಿಷ ತಡವಾಗಿ ಆರಂಭವಾಯಿತು. ಮಧ್ಯಾಹ್ನ 3 ಗಂಟೆಗೆ ಕಲಾಪ ಆರಂಭವಾಗಬೇಕಿತ್ತು, ಕರೆಗಂಟೆಯೂ ಸರಿಯಾದ ಸಮಯಕ್ಕೆ ಬಾರಿಸಿತು. ಇಷ್ಟಾದರೂ ಶಾಸಕರು ಸಭಾಂಗಣದತ್ತ ಸುಳಿಯಲಿಲ್ಲ. ಹೀಗಾಗಿ ಕೋರಂ ಭರ್ತಿಗೆ ಸ್ಪೀಕರ್ ಕಾಯಬೇಕಾಯಿತು. ಅಂತೂ ಇಂತೂ 3.55ಕ್ಕೆ ಕಲಾಪ ಆರಂಭಿಸಲಾಯಿತು.



ಕಲಾಪಕ್ಕೆ ಸಕಾಲದಲ್ಲಿ ಹಾಜರಾಗುವಂತೆ ಸಚಿವರು, ಶಾಸಕರಿಗೆ ಸ್ಪೀಕರ್ ಸೂಚಿಸಿದರು. ಕೋರಂ ಕೊರತೆಯಾದರೆ ಕಲಾಪ ನಡೆಸುವುದು ಹೇಗೆ? ಮೇಲಾಗಿ ನೀವು ನನಗೆ ಅವಕಾಶ ಕೊಡಲಿಲ್ಲ ಎಂದು ಹೇಳುತ್ತೀರಿ. ಸಕಾಲಕ್ಕೆ ಹಾಜರಾದರೆ ಕಲಾಪ ಸುಗಮವಾಗಿ ನಡೆಸಲು ಅನುಕೂಲವಾಗುತ್ತದೆ. ಸಚಿವರು ಸಮಯಕ್ಕೆ ಸರಿಯಾಗಿ ಬರಬೇಕು ಎಂದು ತಾಕೀತು ಮಾಡಿದರು. ಮಧ್ಯ ಪ್ರವೇಶಿಸಿದ ಆರಗ ಜ್ಞಾನೇಂದ್ರ, ಕುರ್ಚಿಗಳು ಖಾಲಿ ಖಾಲಿ ಹೊಡೆಯುತ್ತದೆ. ಅದನ್ನೇ ಟಿ.ವಿ.ಯಲ್ಲಿ ತೋರಿಸುತ್ತಾರೆ. ಜನ ನಮ್ಮನ್ನು ಹಳ್ಳಿಗೆ ಹೋದರೆ ಕಲಾಪದಲ್ಲಿ ಭಾಗವಹಿಸದೆ ಎಲ್ಲಿಗೆ ಹೋಗುತ್ತೀರಿ ಎಂದು ಕೇಳುತ್ತಾರೆ. ಇದಕ್ಕೆ ಏನಾದರೂ ಮಾಡಬೇಕು. ಹೊಸ ಶಾಸಕರು ಇಷ್ಟೊಂದು ನಿರಾಸಕ್ತಿ ತಾಳಿದರೆ ಹೇಗೆ ಎಂದು ಪ್ರಶ್ನಿಸಿದರು. ಪೂರ್ವನಿಗದಿತ ವೇಳಾಪಟ್ಟಿಯಂತೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಬೇಕಿತ್ತು. ಶಾಸಕರ ಕೊರತೆ ಕೂಡ ಅವರ ಉತ್ಸಾಹ ಕಸಿಯಿತು. ನಾನು ಬುಧವಾರ ಮಾತನಾಡುತ್ತೇನೆ. ಇಲ್ಲಿ ಶಾಸಕರೇ ಇಲ್ಲ. ಖಾಲಿ ಕುರ್ಚಿಗೆ ಭಾಷಣ ಮಾಡಬೇಕೆ? ನೀವು ಬಿಲ್ ತೆಗೆದುಕೊಂಡು ಪಾಸು ಮಾಡಿಕೊಳ್ಳಿ. ಅಜೆಂಡಾ ಇದ್ದರೆ ಮುಂದುವರಿಸಿ ಎಂದು ಬೇಸರ ವ್ಯಕ್ತಪಡಿಸಿದರು. ಬಳಿಕ ವಿಧೇಯಕ ಪರ್ಯಾಲೋಚನೆ ನಡೆದು ಅನುಮೋದನೆ ಆಯಿತು. ನಂತರದ ಪ್ರಕ್ರಿಯೆ ಗಮನ ಸೆಳೆಯುವ ಸೂಚನೆಗೆ ಪ್ರಸ್ತಾವನೆ ಕೊಟ್ಟ ಅನೇಕ ಶಾಸಕರು ಗೈರಾಗಿದ್ದರು. ಕೊನೆಗೆ 5.30ಕ್ಕೆ ಕಲಾಪ ಮುಕ್ತಾಯಗೊಂಡಿತು.

## ಠೇವಣಿ ವಂಚಕರಿಗೆ ಶಿಕ್ಷೆ ಹೆಚ್ಚು, ದುಬಾರಿ ದಂಡ

ಹೆಚ್ಚಿನ ಬಡ್ಡಿ ಆಸೆ ತೋರಿಸಿ ಜನರನ್ನು ವಂಚಿಸುವ ಹಣಕಾಸು ಸಂಸ್ಥೆಗಳನ್ನು ನಿಯಂತ್ರಿಸುವ ಉದ್ದೇಶದಿಂದ ಸರ್ಕಾರ ಕಠಿಣ ಹಾದಿ ತುಳಿದಿದೆ. ತಪ್ಪಿತಸ್ಥರ ಜೈಲು ಶಿಕ್ಷೆ ಮತ್ತು ದಂಡ ಪ್ರಮಾಣ ಹೆಚ್ಚಿಸುವ ಕಾನೂನನ್ನು ಪ್ರಸ್ತಾಪಿಸುವ 'ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ತಿದ್ದುಪಡಿ ವಿಧೇಯಕ'ಕ್ಕೆ ವಿಧಾನಸಭೆಯಲ್ಲಿ ಮಂಗಳವಾರ ಅನುಮೋದನೆ ದೊರೆತಿದೆ. ಕಾಯ್ದೆ ಬಗ್ಗೆ ಪ್ರಸ್ತಾಪಿಸಿದ ಡಿಸಿಎಂ ಗೋವಿಂದ ಕಾರಜೋಳ, ಇದರಲ್ಲಿ ಕಂದಾಯ ಇಲಾಖೆ ಕಾರ್ಯದರ್ಶಿಗಳಿಗೆ ಅಧಿಕಾರ ಕೊಡಲಾಗಿದೆ. ಅವರ ಅಧೀನದಲ್ಲಿ ಬರುವ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿಗಳಿಗೂ ಅಧಿಕಾರ ಕೊಟ್ಟಿದ್ದೇವೆ. ಜೈಲುಶಿಕ್ಷೆ 3ರಿಂದ 7 ವರ್ಷ ಇತ್ತು. ಅದನ್ನು 5ರಿಂದ 7 ವರ್ಷ ಮಾಡಿದ್ದೇವೆ. ದಂಡ ಕೂಡ 5 ಲಕ್ಷದಿಂದ 50 ಕೋಟಿ ರೂ. ವರೆಗೂ ದಂಡ ವಿಧಿಸಬಹುದು ಎಂದರು.